
■ ಹನಿ

# ರನ್ ರನ್ ರೈನಾ

ಭಾರತದ ಕ್ರಿಕೆಟ್ ತಂಡದಲ್ಲಿ ವಿಪರೀತ ನೂಕುನುಗ್ಗಲು. ಒಬ್ಬರಿಗಿಂತ ಒಬ್ಬರು ಪ್ರತಿಭಾವಂತ ಕ್ರಿಕೆಟಿಗರು ತಂಡಕ್ಕೆ ಧಾಂಗುಡಿ ಇಡುತ್ತಿದ್ದಾರೆ. ತಂಡದಲ್ಲಿ ಈಗಾಗಲೆ ಅನುಭವಿ ಆಟಗಾರರು ತುಂಬಿ ತುಳುಕುತ್ತಿದ್ದಾರೆ. ಅವರನ್ನು ಕೈಬಿಡುವುದು ಕಷ್ಟ. ಅದರ ಜತೆಗೆ ಹೊಸಬರನ್ನು ಸೇರಿಸಿಕೊಳ್ಳಬೇಕು ಅಂದರೆ ಇನ್ನೂ ಕಷ್ಟ. ಚೆನ್ನಾಗಿ ಆಡುವವರನ್ನೇ ಕೈ ಬಿಡಬೇಕಾದ ಪರಿಸ್ಥಿತಿ. ಇಂತಹ ನೂಕು ನುಗ್ಗಲಿನ ನಡುವೆಯೇ ಸುರೇಶ್ ರೈನಾ ತಮ್ಮ ಅಳಲು ತೋಡಿಕೊಂಡಿದ್ದಾರೆ. 'ನಾನು ಚೆನ್ನಾಗಿ ಆಡುತ್ತಿದ್ದರೂ ನನ್ನನ್ನು ಭಾರತ ತಂಡದಿಂದ ಕೈಬಿಟ್ಟಿದ್ದಾರೆ' ಎನ್ನುವುದು ಅವರ ನೋವು. ಕಳೆದ ಎರಡು ಕ್ರಿಕೆಟ್ ಸೀಸನ್ ನಲ್ಲಿ ಫೇಲ್ ಆದದ್ದೇ ಅವರಿಗೆ ದುಬಾರಿಯಾಗಿ ಪರಿಣಮಿಸಿತು. ಆದರೆ ಈಗ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಅವರ ಅತ್ಯುತ್ತಮ ಸಾಧನೆ ನೋಡಿ ಆಯ್ಕೆದಾರರು ಮತ್ತೆ ತಲೆ ಕೆರೆದುಕೊಂಡಿದ್ದಾರೆ. ಪರಿಣಾಮವಾಗಿ 20 ಟ್ವೆಂಟಿ ಸರಣಿಯಲ್ಲಿ ಮತ್ತೆ ಭಾರತ ತಂಡದಲ್ಲಿ ಜಾಗ ಸಿಕ್ಕಿದೆ. ಆದರೆ ರೈನಾ ಅವರ ನೋವು ಇಲ್ಲಿಗೇ ನಿಂತಿಲ್ಲ. 2019ರಲ್ಲಿ ಇಂಗ್ಲೆಂಡಿನಲ್ಲಿ ನಡೆಯಲಿರುವ 50 ಓವರ್‌ಗಳ ಏಕದಿನ ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯಲೇಬೇಕು ಎನ್ನುವುದು ಈಗ ಅವರ ಕನಸು. ಅದು ಈಡೇರುವುದೆ.. ಎನ್ನುವುದೀಗ ಕುತೂಹಲ.

ಹಿಂದೆ 2011ರಲ್ಲಿ ಭಾರತ ವಿಶ್ವಕಪ್ ಜಯಿಸಿದ ತಂಡದಲ್ಲಿ ರೈನಾ ಇದ್ದರು. ಇಂಗ್ಲೆಂಡಿನಲ್ಲಿ ಅವರ ಆಟವೂ ಸೊಗಸಾಗಿತ್ತು. ಹಾಗಾಗಿಯೇ ಅವರಿಗೆ ಇನ್ನೊಮ್ಮೆ ವಿಶ್ವಕಪ್ ತಂಡದಲ್ಲಿ ಸ್ಥಾನ ಗಿಟ್ಟಿಸುವ ಭರವಸೆ ಇದೆ. ಇನ್ನೂ 31ರ ಹರೆಯದ ಸುರೇಶ್ ಕುಮಾರ್ ರೈನಾ (ಬರ್ತ್ ಡೇ 27.1.86) ದೈಹಿಕವಾಗಿಯೂ ಫಿಟ್ ಆಗಿದ್ದಾರೆ. ಕಳೆದ ಸಲ ಭಾರತ ತಂಡದ ಆಯ್ಕೆ ವೇಳೆ ಅವರ ದೈಹಿಕ ಫಿಟ್ ನೆಸ್ ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ತಂಡದಿಂದ ಕೈ ಬಿಡಲು ಅದೇ ಕಾರಣವಾಯಿತು. ರೆಕಾರ್ಡ್ ಗಳನ್ನು ಗಮನಿಸಿದರೆ, ಇವತ್ತಿಗೂ ರೈನಾ ಅವರ ಹೆಸರು ಅಗ್ರಸ್ಥಾನದಲ್ಲಿ ರಾರಾಜಿಸುತ್ತಿದೆ. ಟಿ20 ಯಲ್ಲಿ ಶತಕ ಹೊಡೆದ ಮೊದಲ ಕ್ರಿಕೆಟಿಗ ಅವರು. ಅದೂ 2010 ರಲ್ಲಿ. ಕ್ರಿಕೆಟಿನ ಎಲ್ಲ ಮೂರು ವಿಧದಲ್ಲೂ ಸೆಂಚುರಿ ಹೊಡೆದ ಭಾರತದ ಮೊದಲ ಆಟಗಾರನೂ ಇವರೇ. ಏಕದಿನ ವಿಶ್ವಕಪ್ ಮತ್ತು ಟಿ20 ವಿಶ್ವಕಪ್– ಹೀಗೆ ಎರಡೂ ಕಡೆ ಸೆಂಚುರಿ ಹೊಡೆದ ಏಕೈಕ ಆಟಗಾರ ರೈನಾ. ಟಿ20 ಯಲ್ಲಿ 6000 ರನ್ ಗಳನ್ನು ಹೊಡೆದ ದಾಖಲೆಯೂ ರೈನಾ ಹೆಸರಲ್ಲಿದೆ. ಫೀಲ್ಡಿಂಗ್ ನಲ್ಲಿ ಪರ್ಫೆಕ್ಟ್. ಜಗತ್ತಿನ ಹತ್ತು ಅತ್ಯುತ್ತಮ ಫೀಲ್ಡರ್ ಗಳ ಪಟ್ಟಿಯಲ್ಲಿ ರೈನಾ ಹೆಸರಿದೆ. ಇಂತಹ ಅಪ್ರತಿಮ ಆಟಗಾರನೊಬ್ಬ ವಿಶ್ವಕಪ್ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸುವುದು ಕಠಿಣವಾಗಿದೆ ಎಂದರೆ, ಇಲ್ಲಿ ಎಷ್ಟೊಂದು ಅರ್ಹರ ಪೈಪೋಟಿ ಇದೆ ಎನ್ನುವುದನ್ನು ಗಮನಿಸಿ.



ತಂಡದಲ್ಲಿ 4 ಅಥವಾ 5ನೆ ವಿಕೆಟ್‌ನಲ್ಲಿ ಆಟವಾಡುವ ವಿಶ್ವಾಸ ರೈನಾ ಅವರದ್ದು. ಈ ಸ್ಥಾನದಲ್ಲಿ ಆಡುವುದು ಬಹಳ ಕಷ್ಟದ ಕೆಲಸ. ಆರಂಭದ ಮೂವರು ಅತ್ಯುತ್ತಮ ಆಟಗಾರರು ಔಟಾದ ಬಳಿಕ ಕ್ರೀಸಿಗೆ ಇಳಿಯಬೇಕು. ಆರಂಭದವರು ಚೆನ್ನಾಗಿ ವೇಗವಾಗಿ ಆಡಿದ್ದರೆ, ಅವರನ್ನು ಮೀರಿಸಬೇಕು. ಅವರು ಕೆಟ್ಟದಾಗಿ ಆಡಿ ಬೇಗ ಔಟಾಗಿದ್ದರೂ ವೇಗವಾಗಿ ರನ್ ಗಳಿಸುವ ಹೊಣೆಗಾರಿಕೆ 4ನೇ ಆಟಗಾರನ ಮೇಲೆಯೇ ಬೀಳುತ್ತದೆ. ಪರಿಸ್ಥಿತಿ ಏನೇ ಇದ್ದರೂ ನಿಭಾಯಿಸುವುದು ಅನಿವಾರ್ಯ. ಒಂದು ಪಂದ್ಯದಲ್ಲಿ ಸೋತರೂ ಹೊಸಬರು ತಂಡದೊಳಕ್ಕೆ ಬರಲು ಕ್ಯೂನಲ್ಲಿ ನಿಂತಿರುತ್ತಾರೆ. ಹೊಸಬರು ಮಾತ್ರವಲ್ಲ, ಇವರಷ್ಟೇ ವಯಸ್ಸಾಗಿರುವ ಹಳಬರೂ ರೈನಾ ಸ್ಥಾನ ಕಿತ್ತುಕೊಳ್ಳಲು ಸದಾ ಸಿದ್ಧ. ರೈನಾ ಅವರದ್ದು ನಿಜಕ್ಕೂ ಇಕ್ಕಟ್ಟಿನ ಸ್ಥಿತಿ.

ರೈನಾ ಕ್ರಿಕೆಟ್ ಜೀವನವೂ ಹಲವು ಕುತೂಹಲಕರ ತಿರುವುಗಳನ್ನು ದಾಟಿ ಬಂದಿದೆ. 19ರ ಹರೆಯದಲ್ಲೇ ಭಾರತ ತಂಡದ ಪರವಾಗಿ ಶ್ರೀಲಂಕಾ ವಿರುದ್ಧ ಏಕದಿನ ಪಂದ್ಯ ಆಡಿದಾತ ರೈನಾ. ಆದರೆ ಭಾರತದ ಟೆಸ್ಟ್ ಕ್ರಿಕೆಟ್ ತಂಡದಲ್ಲಿ ಸ್ಥಾನ ಗಳಿಸಲು ಐದು ವರ್ಷ ಕಾಯಬೇಕಾಯಿತು. 2010 ರಲ್ಲಿ ಟೆಸ್ಟ್ ತಂಡಕ್ಕೆ ಪ್ರವೇಶ ಪಡೆದ ರೈನಾ ಮೊದಲ ಆಟದಲ್ಲೇ ಸೆಂಚುರಿ ಹೊಡೆದವರು.ಆದರೆ 2015ರಲ್ಲಿ ಟೆಸ್ಟ್ ತಂಡದಿಂದ ಹೊರಬಿದ್ದಿರುವ ಅವರು ಈವರೆಗೆ ಮರಳಿ ಪ್ರವೇಶಿಸಲು ಆಗಿಲ್ಲ. ಸರಿಸುಮಾರು ಇದೇ ಅವಧಿಗೆ ಭಾರತದ ಏಕದಿನ ತಂಡದಿಂದಲೂ ಅವರು ಸ್ಥಾನ ವಂಚಿತರಾಗಿದ್ದಾರೆ. ಅಂದರೆ ಅವರೀಗ 20 ಟ್ವೆಂಟಿ ಎಕ್ಸ್ ಪರ್ಟ್ ಮಾತ್ರ!

ಭಾರತದ ಅಂಡರ್ 19 ತಂಡದಲ್ಲೂ ಇನ್ನೂ ಮೀಸೆ ಚಿಗುರದ ಹುಡುಗರು ಭಾರತದ ಸೀನಿಯರ್ ತಂಡಕ್ಕೆ ನುಗ್ಗಲು ಕಾದು ಕುಳಿತಿದ್ದಾರೆ. ಹಾಗಾಗಿ ರೈನಾ ಮುಂದಿನ ವರ್ಷದ ವಿಶ್ವಕಪ್ ನಲ್ಲಿ ಆಡುವುದರ ಬಗ್ಗೆ ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ.

ಐಪಿಎಲ್ 20 ಟ್ವೆಂಟಿಯಲ್ಲಿ ಮಾತ್ರ ರೈನಾ ಇವತ್ತಿಗೂ ಸೂಪರ್ ಮ್ಯಾನ್. ಹಿಂದೆ ಚೆನ್ನೈ ಸೂಪರ್ ಕಿಂಗ್ ತಂಡದ ಉಪನಾಯಕನಾಗಿ ಮಿಂಚಿದ ರೈನಾ, ಬಳಿಕ ಗುಜರಾತ್ ಲಯನ್ಸ್ ತಂಡಕ್ಕೆ ನಾಯಕನಾಗಿ ಮಿಂಚಿದರು. ಈಗ ಮತ್ತೆ ಚೆನ್ನೈ ಸೂಪರ್ ಕಿಂಗ್ ನಲ್ಲಿ ಆಡುತ್ತಿದ್ದಾರೆ. ಅಗತ್ಯ ಬಿದ್ದರೆ ಆಫ್ ಸ್ಪಿನ್ ಮಾಡಿ ವಿಕೆಟ್ ಉರುಳಿಸಬಲ್ಲ ಈ ಎಡಗೈ ಆಟಗಾರನ, ಬಲಗೈಯನ್ನು ಮೇಲೆತ್ತಲು ವಿಶ್ವಕಪ್ ಆಯ್ಕೆ ತಂಡ ಮುಂದಾಗುವುದೇ ಎನ್ನುವುದನ್ನು ಕಾದು ನೋಡಬೇಕು. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65